(42)

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/12/2015-16 ದಿ:27-05-2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| ಷಣ್ಮುಖ ತಂದೆ ಲೇಟ್ ಮರ್‍ರಿಸ್ವಾಮಿ<br>ಶ್ರೀಧರಗಡ್ಡೆ ಗ್ರಾಮ. | | ಮಾರೆಮ್ಮ ಗಂಡ ಮರ್‍ರಿಸ್ವಾಮಿ<br>ಶ್ರೀಧರಗಡ್ಡೆ ಗ್ರಾಮ. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಶ್ರೀಧರಗಡ್ಡೆ | 162 ಪೈಕಿ | 4-00 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಶ್ರೀಧರಗಡ್ಡೆ ಗ್ರಾಮದ ಸ,ನಂ.162 ರಲ್ಲಿ ವಿ:4-00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಹರಿಜನ ಮರಿಸ್ವಾಮಿ ತಂದೆ ಹುಲುಗಪ್ಪ ಹೆಸರಿಗೆ ಪಟ್ಟಾ ಇದ್ದು, ಇವರು ದಿನಾಂಕ: 08-07-2012 ರಂದು ಮರಣ ಹೊಂದಿರುವುದರಿಂದ, ಪೋತಿವಾರಸು ಮೇರೆಗೆ ಮಗನಾದ ಷಣ್ಮುಖ ತಂದೆ ಲೇಟ್ ಮರಿಸ್ವಾಮಿ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಕ್ರಮ ಜರುಗಿಸಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಶ್ರೀಧರಗಡ್ಡೆ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಹಾಲಿ ಪಟ್ಟಾದಾರನ ಪತ್ನಿಯಾದ ಮಾರೆಮ್ಮ ಗಂಡ ಮರಿಸ್ವಾಮಿ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:10-06-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:34/2014-15 ದಿನಾಂಕ: 22-06-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿಯು ಗೈರು ಹಾಜರು, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

(40)

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ಪ್ರತಿವಾದಿಗಳ ವಾದ ಆಲಿಸಲಾಯಿತು. ದಾವಾ ಜಮೀನು ತನ್ನ ಗಂಡನ ಹೆಸರಿಗೆ ಪಟ್ಟಾ ಇದ್ದು, ಪ್ರಸ್ತುತ ತನ್ನ ಪತಿ ಮರಣ ಹೊಂದಿರುವುದರಿಂದ, ಮೊದಲಿಗೆ ತನ್ನ ಹೆಸರಿಗೆ ಹಕ್ಕು ಬದಲಾವಣೆ ಆಗಬೇಕಾಗಿದ್ದು, ಅಲ್ಲದೇ ನಮಗೆ ಇನ್ನು (6) ಜನ ಮಕ್ಕಳಿದ್ದು, ನಮ್ಮಗಳ ಯಾರ ಒಪ್ಪಿಗೆ ಇಲ್ಲದೇ ಷಣ್ಮುಖ ಒಬ್ಬನೇ ಅರ್ಜಿ ಸಲ್ಲಿಸಿದ್ದು, ಸದ್ರಿ ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾರೆ.

ಮುಂದುವರೆದು, ಸದ್ರಿ ಪ್ರಕರಣದ ವಾದಿ ವಿಚಾರಣೆಗೆ ಹಾಜರಾಗಿರುವುದಿಲ್ಲ, ಯಾವುದೇ ಹೇಳಿಕೆ ನೀಡಿರುವುದಿಲ್ಲ. ಕಾರಣ ಸದ್ರಿ ಪ್ರಕರಣದಲ್ಲಿ ಇವರಿಗೆ ಆಸಕ್ತಿ ಇರುವುದಿಲ್ಲವೆಂದು ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ–

ದಿ:27–05–2016

**ಸಂ.ಕಂ/ಹಬ/ವಿವಾದ/12/2015–16**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಶ್ರೀಧರಗಡ್ಡೆ ಗ್ರಾಮದ ಸ,ನಂ.162 ರಲ್ಲಿ ವಿ:4–00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಹರಿಜನ ಮರಿಸ್ವಾಮಿ ತಂದೆ ಹುಲುಗಪ್ಪ ಹೆಸರಿಗೆ ಪಟ್ಟಾ ಇದ್ದು, ಇವರು ದಿನಾಂಕ:08–07–2012 ರಂದು ಮರಣ ಹೊಂದಿರುವುದರಿಂದ, ಪೋತಿವಾರಸು ಮೇರೆಗೆ ಮಗನಾದ ಷಣ್ಮುಖ ತಂದೆ ಲೇಟ್ ಮರಿಸ್ವಾಮಿ ಇವರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ತಾಯಿಯ ಆಕ್ಷೇಪಣೆ ಇರುವುದರಿಂದ ಮತ್ತು ಅರ್ಜಿದಾರನು ವಿಚಾರಣೆಗೆ ಹಾಜರಾಗಿ ಯಾವುದೇ ಹೇಳಿಕೆ ನೀಡದೇ ಇರುವುದರಿಂದ, ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಲು ಮತ್ತು ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:27–05–2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

M. [signature]

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರರವರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ–ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ